ಸಾಕ್ಷಿಯ ಹೆಸರುಃ ಕಾರ್ತಿಕ್ ಕುಮಾರ್ ಸಿ.ಪಿ.

ದಿನಾಂಕ: 06-08-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಎಲ್.ಎನ್. ವಕೀಲರ ಪರವಾಗಿ ಶ್ರೀ ಡಿ.ಕೆ.ಎಸ್. ವಕೀಲರಿಂದಃ

ನಾನು ಇಂಜಿನಿಯರಿಂಗ್ ಪದವಿ ಪಡೆದಿರುತ್ತೇನೆ. ಪ್ರತಿವಾದಿಗಳೆಲ್ಲ ನನ್ನ ಸಂಬಂಧಿಕರು ಎಂದರೆ ಸರಿ. ದಾವಾ ಐಟಂ ನಂ.1 ರಲ್ಲಿ ನನಗೆ ಎಷ್ಟು ಹಕ್ಕು ಇದೆ ಅಷ್ಟೇ ಹಕ್ಕು ವಾದಿಗೆ ಇದೆ ಎಂದರೆ ಸುಳ್ಳು. ದಾವಾಸ್ವತ್ತು ಮೂಲತಃ ಅಜ್ಜನಾಯಕರವರಿಗೆ ಸೇರತ್ತು ಎಂದರೆ ಸರಿ. ಈಗಲೂ ಕೂಡ ದಾವಾಸ್ವತ್ತಿನ ಖಾತೆ ಅಜ್ಜನಾಯಕರವರ ಹೆಸರಿನಲ್ಲಿದೆ ಎಂದರೆ ಸುಳ್ಳು. ಸದರಿ ಅಜ್ಜನಾಯಕರವರಿಗೆ ಇಬ್ಬರು ಗಂಡು ಮಕ್ಕಳು ಎಂದರೆ ಸರಿ. ಅವರು ಒಬ್ಬರು ಕಾಳನಾಯಕ ಹಾಗೂ ಇನ್ನೊಬ್ಬರು ಸಣ್ಣಪ್ಪನಾಯಕ ಎಂದರೆ ಸರಿ. ಕಾಳನಾಯಕರವರಿಗೆ ಪುಟ್ಟಲಕ್ಷ್ಮಮ್ಮ, ನಿರ್ಮಲ, ಗಂಗಮ್ಮ, ಮಲ್ಲೇಶ ಮಕ್ಕಳು ಎಂದರೆ ಸಾಕ್ಷಿ ಇನ್ನೊಬ್ಬರು ಇದ್ದಾರೆ, ಅವರು ರುಕ್ಮಿಣಿ ಎಂದು ಇದ್ದು ಅವರು ಈಗ ಕಾಲವಾಗಿರುತ್ತಾರೆ ಎನ್ನುತ್ತಾರೆ. ಸಣ್ಣಪ್ಪನಾಯಕರವರ ಮಕ್ಕಳು ಸ್ವಾಮಿನಾಯಕ ಮತ್ತು ಯಶೋಧಮ್ಮ ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ.

2) 1 ರಿಂದ 5 ನೇ ಪ್ರತಿವಾದಿಯರು 6 ನೇ ಪ್ರತಿವಾದಿಗೆ ದಾವಾಸ್ವತ್ತುಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ಹೌದು. ಸದರಿ ಕ್ರಯಪತ್ರಕ್ಕೆ 1 ರಿಂದ 5 ನೇ ಪ್ರತಿವಾದಿಯಗಳು ಸಹಿ ಮಾಡಿಲ್ಲ ಎಂದರೆ ಸರಿ. ದಾವಾಸ್ವತ್ತುಗಳ ಮೇಲೆ ವಾದಿಗಳಿಗೂ ಕೂಡ ಭಾಗಾಂಶ ಇದೆ ಎಂದರೆ ಸುಳ್ಳು. ಅಜ್ಜನಾಯಕರವರ ಹೆಣ್ಣು ಮಕ್ಕಳಾದ ಗೌರಮ್ಮ ಮತ್ತು ಕೆಂಪಮ್ಮ ಸುಮಾರು 50 ವರ್ಷಗಳ ಹಿಂದೆ ಮೃತರಾಗಿರುತ್ತಾರೆ ಎಂದರೆ ಸಾಕ್ಷಿ ವರ್ಷಗಳು ಗೊತ್ತಿಲ್ಲ ಆದರೆ ಮೃತರಾಗಿರುತ್ತಾರೆ ಎನ್ನುತ್ತಾರೆ. ಸದರಿ ಗೌರಮ್ಮ ಮತ್ತು ಕೆಂಪಮ್ಮರವರ ಮದುವೆ ಸಮಯದಲ್ಲಿ

ಅಜ್ಜನಾಯಕರವರು ಚಿನ್ನ ಮತ್ತು ನಗದು ಹಣವನ್ನು ಕೊಟ್ಟು ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸುಳ್ಳು. ದಾವಾಸ್ವತ್ತುಗಳು ವಾದಿ ಮತ್ತು 1ನೇ ಪ್ರತಿವಾದಿಯ ನಡುವೆ ಭಾಗಾಂಶ ಆಗಿರುವುದಿಲ್ಲ ಎಂದರೆ ಸುಳ್ಳು.

ಈ ಹಂತದಲ್ಲಿ ವಾದಿ ಪರ ವಕೀಲರ ಕೋರಿಕೆ ಮೇರೆಗೆ ಮುಂದುವರಿದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.